ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ:149: ಆರ್.ಟಿ.ಐ.:2016

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ: 06.08.2016.

## ಸುತ್ತೋಲೆ

ವಿಷಯ: ಸಾರ್ವಜನಿಕ ಮಾಹಿತಿ ಅಧಿಕಾರಿ ಹುದ್ದೆಯ ಪ್ರಭಾರ ವಹಿಸಿಕೊಂಡ 30 ದಿನಗಳ ಒಳಗಾಗಿ ಮಾಹಿತಿ ನೀಡಲು ವಿಫಲರಾದ ಸಂದರ್ಭದಲ್ಲಿ ಅಂಥಹ ಸಾರ್ವಜನಿಕ ಮಾಹಿತಿ ಅಧಿಕಾರಿಯ ಮೇಲೆ ದಂಡ ವಿಧಿಸುವುದಕ್ಕೆ ಆತನನ್ನು ಹೊಣೆಗಾರರನ್ನಾಗಿ ಮಾಡುವ ಬಗ್ಗೆ.

---0---

ಮಾಹಿತಿ ಹಕ್ಕು ಅಧಿನಿಯಮ, 2005ರ ಸಂಪೂರ್ಣ ಅನುಷ್ಠಾನ ಮತ್ತು ಬಲವರ್ಧನೆಗಾಗಿ ಕರ್ನಾಟಕ ಮಾಹಿತಿ ಆಯೋಗವು 2014-15ನೇ ಸಾಲಿನ ವಾರ್ಷಿಕ ವರದಿಯಲ್ಲಿನ ಶಿಫಾರಸ್ಸುಗಳಲ್ಲಿ, ಕ್ರಮ ಸಂಖ್ಯೆ:7.5ರಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.

"ಒಬ್ಬ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ತೆರವಾದ ಹುದ್ದೆಯ ಪ್ರಭಾರವನ್ನು ಇನ್ನೊಬ್ಬ ಸಾರ್ವಜನಿಕ ಮಾಹಿತಿ ಅಧಿಕಾರಿ ವಹಿಸಿಕೊಂಡ 30 ದಿನಗಳ ಒಳಗಾಗಿ ಮಾಹಿತಿ ನೀಡಲು ವಿಫಲನಾಗುವ ಸಂದರ್ಭದಲ್ಲಿ ಅಂಥಹ ಸಾರ್ವಜನಿಕ ಮಾಹಿತಿ ಅಧಿಕಾರಿ ಮೇಲೆ ದಂಡ ವಿಧಿಸುವುದಕ್ಕೆ ಆತನನ್ನು ಹೊಣೆಗಾರರನ್ನಾಗಿ ಮಾಡಬೇಕಿದೆ".

ಪ್ರಸ್ತುತ ಮಾಹಿತಿ ಕೋರಿದ ದಿನಾಂಕದಂದು ಪ್ರಭಾರ ಹೊಂದಿದ್ದ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ನಿಗದಿಪಡಿಸಿದ ಕಾಲಾವಧಿಯೊಳಗೆ ಮಾಹಿತಿಯನ್ನು ಒದಗಿಸಲು ತಪ್ಪಿದಲ್ಲಿ, ಅವರ ವಿರುದ್ಧ ಮಾತ್ರ ಅಧಿನಿಯಮದ ಕಲಂ 20(1)ರ ಅಡಿಯಲ್ಲಿ ದಂಡ ವಿಧಿಸಬಹುದಾಗಿದೆ ಮತ್ತು ಕಲಂ 20(2)ರ ಅಡಿಯಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಕ್ಕಾಗಿ ಶಿಫಾರಸ್ಸು ಮಾಡಬಹುದಾಗಿದೆ. ಆದರೆ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ವರ್ಗಾವಣೆ, ನಿವೃತ್ತಿ ಮುಂತಾದ ಕಾರಣಗಳಿಂದಾಗಿ ಬದಲಾಗುತ್ತಿರುವುದರಿಂದ, ಆನಂತರ ಆ ಹುದ್ದೆಗೆ ಬರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ಅವರು ಆ ಹುದ್ದೆಯ ಪ್ರಭಾರ ವಹಿಸಿಕೊಂಡ 30 ದಿನಗಳ ಒಳಗಾಗಿ ಬಾಕಿ ಇರುವ ಎಲ್ಲಾ ಅರ್ಜಿಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಲು ಹೊಣೆಗಾರರನ್ನಾಗಿ ಮಾಡುವುದು ಮತ್ತು ಅದಕ್ಕೆ ತಪ್ಪಿದಲ್ಲಿ, ಕಲಂ 20(1)ರ ಮತ್ತು ಕಲಂ 20(2)ರ ಉಪಬಂಧಗಳನ್ನು ಅವರ ವಿರುದ್ಧ ಜಾರಿಗೊಳಿಸಲಾಗುವುದು.

ಆದ್ದರಿಂದ, ಆಯೋಗದ ಶಿಫಾರಸ್ಸಿನ್ವಯ ವರ್ಗಾವಣೆಯಿಂದ/ನಿವೃತ್ತಿಯಿಂದ ತೆರವಾದ ಹುದ್ದೆಗಳಲ್ಲಿ ಪ್ರಭಾರ ವಹಿಸಿಕೊಂಡಂತಹ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಪ್ರಭಾರ ವಹಿಸಿಕೊಂಡ 30 ದಿನಗಳೊಳಗಾಗಿ ಮಾಹಿತಿಯನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ತಮ್ಮ ಆಡಳಿತದ ಅಧೀನದಲ್ಲಿ ಬರುವ ಎಲ್ಲ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಚಿಸುವುದು.

(ಪಿ.ರಮೇಶ್ ಪಾಂಡೆ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

ಇವರಿಗೆ,
ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು